1. ರಾಜ್ಯದ ಗಡಿ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ನಕ್ಸಲೀಯರ ಹೆಸರಿನಲ್ಲಿ ದರೋಡೆ, ಸುಲಿಗೆ, ಕೊಲೆ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

2. ಬಂದಿದ್ದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :-

1. ರಾಜ್ಯದ ಗಡಿ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ನಡೆದಿರುವ ಕೆಲವು ದರೋಡೆ, ಸುಲಿಗೆ, ಕೊಲೆಗಳಲ್ಲಿ ನೆರೆ ರಾಜ್ಯದ ನಕ್ಸಲೀಯರ ಪ್ರಭಾವ ಇರಲಿಕ್ಕೂ ಸಾಧ್ಯ ಎಂದು ಶಂಕಿಸಲಾಗಿದೆ.

2. ನಕ್ಸಲೀಯರ ಚಟುವಟಿಕೆಗಳನ್ನು ಹತ್ತಿಕ್ಕಲು ಜಿಲ್ಲೆಗಳಲ್ಲಿ ಸಶಸ್ತ್ರ ಪೋಲೀಸ್ ಪಡೆಗಳನ್ನು ಇರಿಸಲಾಗಿದೆ. ಈ ಪೋಲೀಸ್ ಠಾಣೆಗಳಿಗೆ ಸಿಬ್ಬಂದಿಗಳನ್ನು ಹೆಚ್ಚಿಸುವ ಬಗ್ಗೆ ಕ್ರಮ ಪರಿಶೀಲಿಸಲಾಗುತ್ತಿದೆ. ಕೊಲೆ, ಸುಲಿಗೆ ದರೋಡೆಗಳನ್ನು ತಡೆಗಟ್ಟಲು ಗಡಿ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ರಾತ್ರಿ ಗಸ್ತನ್ನು ಏರ್ಪಡಿಸಲಾಗಿದೆ.

ವಿಷಯ :- ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಸಾರ್ವಜನಿಕ ವಿತರಣ ವ್ಯವಸ್ಥೆ.

ಚುಕ್ಕಿ ಗುರುತಿಲ್ಲದ ಪ್ರಶ್ನೆ ಸಂಖ್ಯೆ 962 (1447)

ಶ್ರೀ ಜೆ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಸಾರ್ವಜನಿಕ ವಿತರಣ ವ್ಯವಸ್ಥೆ.

ಆ) ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದ ನ್ಯಾಯಬೆಲೆ ಅಂಗಡಿ ಮಾಲೀಕರ ಸಂಖ್ಯೆ ;

ಇ) ಇಂತಹ ಪ್ರಕರಣಗಳ ಬಗ್ಗೆ ಸರ್ಕಾರದ ನಿಲುವೇನು?

ಈ) ಹಾಲಿ ಇರುವ ಅವೈಜ್ಞಾನಿಕ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಉತ್ತಮಪಡಿಸಲು (ತಡೆಯಲು) ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :-

ಅ) ಕೇಂದ್ರ ಸರ್ಕಾರವು ರಾಜ್ಯಕ್ಕೆ ಆಹಾರಧಾನ್ಯ ಸಕ್ಕರೆ, ಸೀಮೆಎಣ್ಣೆ ಮತ್ತು ತಾಳೆಎಣ್ಣೆಯನ್ನು ಬಿಡುಗಡೆ ಮಾಡುತ್ತಿದ್ದು ಈ ಪ್ರಮಾಣವನ್ನು ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ಆಧಾರದ ಮೇಲೆ ಜಿಲ್ಲೆಗಳಿಗೆ ಮರು ಹಂಚಿಕೆ ಮಾಡಲಾಗುವುದು. ಜಿಲ್ಲೆಗಳಲ್ಲಿ

ಜಿಲ್ಲಾಧಿಕಾರಿಗಳು ಮತ್ತು ಬೆಂಗಳೂರು ಪಡಿತರ ಪ್ರದೇಶದಲ್ಲಿ ಜಂಟಿ ನಿರ್ದೇಶಕರು (ಆಪ) ರವರು ಪಡಿತರ ಚೀಟಿಗಳ ಆಧಾರದ ಮೇಲೆ ಸಗಟು ಮತ್ತು ಚಿಲ್ಲರೆ ಮಾರಾಟಗಾರರಿಗೆ ಮರು ಹಂಚಿಕೆ ಮಾಡುತ್ತಾರೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಆಹಾರಧಾನ್ಯ, ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆ ಎಣ್ಣೆಯನ್ನು ಪ್ರತಿ ತಿಂಗಳು ಹಂಚಿಕೆ ಮಾಡಲಾಗುತ್ತಿದೆ. ತಾಳೆಎಣ್ಣೆ ಹಂಚಿಕೆಯನ್ನು ಕೇಂದ್ರ ಸರ್ಕಾರದ ಬಿಡುಗಡೆ ಮತ್ತು ದಾಸ್ತಾನು ಸೌಲಭ್ಯತೆಯನ್ನು ಆವಲಂಬಿಸಿ ಮರು ಹಂಚಿಕೆ ಮಾಡಲಾಗುತ್ತಿದೆ. ಅಲ್ಲದೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದವರು ಹಸಿರು ಪಡಿತರ ಚೀಟಿಗಳಿಗೆ ಸೀರೆ, ದೋತಿ ಸಹ ಸಗಟು ನಾಮಿನಿದಾರರ ಮೂಲಕ ಹಂಚಿಕೆ ಮಾಡಲಾಗುತ್ತಿದೆ ನಗರ ಪ್ರದೇಶದಲ್ಲಿ ಆಗತ್ಯ ವಸ್ತುಗಳ ವಿತರಣೆಗೆ ಫೋಟೋ ಪಡಿತರ ಚೀಟಿಗಳನ್ನು ನೀಡಲಾಗಿದ್ದು ಸಹಾಯಧನಯುಕ್ತ ಆಹಾರಧಾನ್ಯ ವಿತರಿಸಲು ಹಸಿರು ಪಡಿತರ ಚೀಟಿ ನೀಡಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಕೇಸರಿ ಪಡಿತರ ಚೀಟಿಗಳನ್ನು ಹಾಗೂ ಸಹಾಯಧನಯುಕ್ತ ಆಹಾರಧಾನ್ಯ ವಿತರಣೆಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಆ) 50

ಐವತ್ತು ಪ್ರಕರಣಗಳನ್ನು ಅಧಿಕೃತ ಪ್ರಾಧಿಕಾರಿಯ ಆದೇಶದ ವಿರುದ್ಧ ದಾಖಲಿಸಿ ತಡೆಯಾಜ್ಞೆಯನ್ನು ಉಚ್ಚ ನ್ಯಾಯಾಲಯದಿಂದ ಪಡೆದಿರುತ್ತಾರೆ.

ಇ) ಇಂತಹ ಪ್ರಕರಣಗಳ ಬಗ್ಗೆ ಸರ್ಕಾರದ ಪರವಾಗಿ ಹಾಜರಾಗಿ ವಾದಿಸಲು ಸರ್ಕಾರಿ ವಕೀಲರನ್ನು ಕೋರಲಾಗಿದೆ.

ಈ) ಸಾಮಾನ್ಯವಾಗಿ ನ್ಯಾಯಬೆಲೆ ಅಂಗಡಿ ಮಾಲೀಕರು ಉಚ್ಚ ನ್ಯಾಯಾಲಯಕ್ಕೆ ಅಧಿಕೃತ ಅಧಿಕಾರಿಯ ನ್ಯಾಯಬೆಲೆ ಅಂಗಡಿ ಮಂಜೂರಾತಿ ಅಥವಾ ನಿಯಮಗಳ ಉಲ್ಲಂಘನೆ ಆದೇಶದ ವಿರುದ್ಧ ಹೋಗುತ್ತಾರೆ. ಸರ್ಕಾರವು ಸಾರ್ವಜನಿಕ ವಿತರಣಾ ಪದ್ಧತಿ ನಿಯಂತ್ರಣ ಆದೇಶ 1992 ನ್ನು ಹೊರತಂತಿದ್ದು ಪ್ರಾಧಿಕಾರಣ ಅಧಿಕಾರಿಯು ನ್ಯಾಯಬೆಲೆ ಅಂಗಡಿ ಮಂಜೂರಾತಿ, ಆಮಾನತ್ತು ರದ್ದುಪಡಿಸಲು ನಿಯಮಗಳನ್ನು ಹೊಂದಿದೆ. ಅಲ್ಲದೆ, ಲಿಕ್ಕಪತ್ರವನ್ನು ಸರಿಯಾಗಿ ಇಡುವಂತೆ ಮಾಡಲು ನ್ಯಾಯಬೆಲೆ ಅಂಗಡಿ ಮಾಲೀಕರು ಕರ್ನಾಟಕ ಆಗತ್ಯವಸ್ತುಗಳ ಲೈಸೆನ್ಸಿಂಗ್ ಆದೇಶ 1986 ರಡಿಯಲ್ಲಿ ಲೈಸೆನ್ಸ್‌ನ್ನು ಸಹ ಪಡೆಯಬೇಕಾಗುತ್ತದೆ. ಸರ್ಕಾರವು ಮೇಲ್ಕಂಡ ಆದೇಶಗಳನ್ನು ಹೊರತಂದು ಸರಿಯಾದ ತೀರ್ಮಾನವನ್ನು ಕೈಗೊಂಡಿದೆ. ಆದ್ದರಿಂದ ಇದು ಅವೈಜ್ಞಾನಿಕ ಪದ್ಧತಿಯಾಗಿರುವುದಿಲ್ಲ.